ಆ) 13,227 ನೌಕರರು ಕೆಲಸ ಕಳೆದುಕೊಂಡಿದ್ದಾರೆ.

ಇ) 11,170 (ಡಿಸೆಂಬರ್ 90ರ ಕೊನೆಯವರೆಗೆ)

ಈ) ಹೌದು.

ಪ್ರತಿ ಹಳ್ಳಿಗಳಲ್ಲಿ ಸ್ಮಶಾನ ಜಾಗ ನಿಗಡಿಪಡಿಸುವ ಬಗ್ಗೆ

1293 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ಹಳ್ಳಿಗಳಲ್ಲೂ ಕಡ್ಡಾಯವಾಗಿ ಸ್ಮಶಾನ ಜಾಗಗಳನ್ನು ನಿಗದಿಪಡಿಸುವ ಬಗ್ಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಸರ್ಕಾರವು ಈ ಬಗ್ಗೆ ಕ್ರಮ ಕೈಗೊಳ್ಳುವುದು.

ಮುಜರಾಯಿ ದೇವಸ್ಥಾನಗಳ ಸಂಖ್ಯೆ

1292 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು?

ಆ) ಈ ದೇವಸ್ಥಾನಗಳಿಗೆ ಬರುವ ವರಮಾನವೆಷ್ಟು?

ಇ) ಈ ದೇವಸ್ಥಾನಗಳ ಅಭಿವೃದ್ಧಿಯ ಬಗ್ಗೆ ಸರ್ಕಾರ ಸಮಗ್ರ ಯೋಜನೆಯನ್ನು ತಯಾರಿಸಿದೆಯೇ?

ಈ) ಈ ಮುಜರಾಯಿ ದೇವಸ್ಥಾನಗಳ ಅರ್ಚಕರ ಸಂಬಳ ಕಡಿಮೆ ಇರುವುದರಿಂದ ಜಾಸ್ತಿ ಮಾಡಲು ಸರ್ಕಾರ ಯೋಚಿಸಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):

ಅ) 41366.

ಆ) ರೂ. 15,02,89,083-00.

ಇ) ಇಲ್ಲ.

ಈ) ಇಲ್ಲ. (ಅರ್ಚಕರ ಸಂಬಳ ಆಯಾ ದೇವಾಲಯದ ಆದಾಯಕ್ಕೆ ಅನುಗುಣವಾಗಿರುತ್ತದೆ. ದೇವಾಲಯದ ಆದಾಯಕ್ಕೂ ಮೀರಿ ಅರ್ಚಕರ ಸಂಬಳ ನೀಡಲು ಕಾಯ್ದೆಯಲ್ಲಿ ಅವಕಾಶ ಇಲ್ಲ).

ಜಿಲ್ಲಾ ವಿಂಡಗಣೆಯ ಬಗ್ಗೆ

1294 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಕ್ಕೆ ಜಿಲ್ಲಾ ವಿಂಗಡಣೆಯ ವರದಿ ಬಂದಿದೆಯೇ?

ಆ) ಈ ವರದಿಯಲ್ಲಿ ಗುರುತಿಸಿರುವ ಹೊಸ ಜಿಲ್ಲೆಗಳು ಯಾವು ಯಾವುವು?

ಇ) ಈ ಹೊಸ ಜಿಲ್ಲೆಗಳು ಯಾವ ಅಸ್ತಿತ್ವಕ್ಕೆ ಬರುತ್ತವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ಪಟ್ಟಿ ಲಗತ್ತಿಸಿದೆ.

ಇ) ಆರ್ಥಿಕ ಭೌಗೋಳಿಕ ಹಾಗೂ ಆಡಳಿತಾತ್ಮಕ ಅಂಶಗಳ ಪರಿಶೀಲನೆಯ ನಂತರ ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ.

ವಾಸುದೇವರಾವ್ ಆಯೋಗ ಹುಂಡೇಕರ್ ಸಮತಿ, ಗದ್ದಿಗೌಡರ್ ಸಮಿತಿಗಳ ವರದಿಯಂತೆ ಜಿಲ್ಲಾ ಕೇಂದ್ರಗಳ ಹೆಸರುಗಳು ಈ ಕೆಳಕಂಡಂತಿವೆ

ಕ್ರ. ಸಂ.	*ಜಿಲ್ಲೆಗಳು*	*ವಾಸುದೇವರಾವ್ ಆಯೋಗ*	*ಹುಂಡೇಕರ್ ಸಮಿತಿ*	*ಗದ್ದಿಗೌಡರ ಸಮಿತಿ*
	ಜಿಲ್ಲೆಗಳು	1. ಗದಗ್ 19 2	1. ನಂಜನಗೂಡು 19 8	1. ಗೋಕಾಕ್ 19 7 2
			2. ಉಡುಪಿ	2. ಚಾಮರಾಜನಗರ
			3. ಬೆಂಗಳೂರು ಸಿಟಿ	3. ಉಡುಪಿ
			4. ದಾವಣಗೆರೆ	4. ಬೆಂಗಳೂರು ಸಿಟಿ
			5. ಬಾಗಲಕೋಟೆ	5. ದಾವಣೆಗೆರೆ
			6. ಗದಗ್	6. ಬಾಗಲಕೋಟೆ
			7. ಹಾವೇರಿ	7. ಗದಗ್
			8. ಯಾದಗೀರ್	8. ಯಾದಗಿರ್
				9. ಕೊಪ್ಪಳ

ಹಳಿಯಾಳ ಪುರಸಭೆಗೆ ಕುಡಿಯುವ ನೀರಿನ ಸಲುವಾಗಿ ಹಣದ ಸಹಾಯ

1306 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಳಿಯಾಳ ಪುರಸಭೆಗೆ 1990-91ರ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಲಾದ ಹಣದ ಪ್ರಮಾಣವೆಷ್ಟು?

ಆ) ಪುರಸಭೆಯ ಆದಾಯ ಮತ್ತು ಅಭಿವೃದ್ಧಿ ಕಾರ್ಯಗಳು ಯಾವುವು?

ಇ) ದಿನೇ ದಿನೇ ಬೆಳೆಯುತ್ತಿರುವ ಹಳಿಯಾಳ ನಗರದ ಜನಸಂಖ್ಯೆಗೆ ಕುಡಿಯುವ ನೀರಿನ ಸರಬರಾಜಿನ ಸಲುವಾಗಿ ವಿಶೇಷ ಹಣವನ್ನಾದರೂ ಬಿಡುಗಡೆ ಮಾಡಬೇಕೆಂದು ಕೋರಿ ಹಳಿಯಾಳ ಪುರಸಭೆಯಿಂದ ಸರ್ಕಾರಕ್ಕೆ ಮನವಿ ಏನಾದರೂ ಬಂದಿದೆಯೇ?

ಈ) ಬಂದಿದ್ದಲ್ಲಿ, ಸರ್ಕಾರಿ ಹಳಿಯಾಳ ಪುರಸಭೆಗೆ ವಿಶೇಷ ಹಣವನ್ನು ಕುಡಿಯುವ ನೀರಿನ ಯೋಜನೆಯ ಸಲುವಾಗಿ ಬಿಡುಗಡೆ ಮಾಡಲು ಕೈಗೊಳ್ಳುವ ಕ್ರಮಗಳಾವುವು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತ ನಗರಾಭಿವೃದ್ಧಿ ಸಚಿವರು):